


# ದರ್ಪಣ ಸರೋವರ !



**ಹೆಸರಿಗೆ ತಕ್ಕಂತೆ ಮಿರರ್ ಲೇಕ್ಸ್ ಕನ್ನಡಿಯನ್ನೂ ಮೀರಿಸುವಂತಿದೆ. ಕಣ್ಣಿಗೆ ಸುಗ್ಗಿ, ಮನಸ್ಸಿಗೆ ಹಬ್ಬ.**

ಚಿತ್ರ– ಲೇಖನ: **ಡಾ. ಶೇಖರ್ ಗೌಳೇರ್**

**ನ್ಯೂ**ಜಿಲೆಂಡಿನ ಮಿಲ್‌ಫೋರ್ಡ್ ಸೌಂಡ್‌ಗೆ ಮತ್ತೊಂದು ಹೆಸರು ಮಿಲ್‌ಪೋರ್ಡ್ ಹ್ಯಾವನ್. ಸ್ವಿಝರ್ಲೆಂಡ್ ನೋಡಿದಾಗ ನನಗೆ ಜಗತ್ತಿನಲ್ಲಿ ಅದಕ್ಕಿಂತ ಪ್ರಾಕೃತಿಕ ಸೌಂದರ್ಯದ ತಾಣ ಮತ್ತೊಂದಿಲ್ಲ ಎನಿಸಿತ್ತು. ಆದರೆ ನ್ಯೂಜಿಲೆಂಡ್ ನೋಡಿದ ಮೇಲೆ ನನ್ನ ಕಲ್ಪನೆಯೇ ಬುಡಮೇಲಾಯಿತು.

ನ್ಯೂಜಿಲೆಂಡ್ ಜಗತ್ತಿನಲ್ಲಿಯೇ ಅತ್ಯಂತ ರಮ್ಯತಾಣ. ಕಳೆದ ವರ್ಷ ನ್ಯೂಜಿಲೆಂಡ್‌ಗೆ ತೆರಳಿ ಆಕ್ಲಂಡ್, ರೊಟೋರೊವಾ, ಮೈಟೊಮೊ ಗುಹೆಗಳನ್ನೂ ನೋಡುತ್ತಿ ನಾಲ್ಕು ದಿನಗಳನ್ನು ಕಳೆದಿದ್ದೆ. ಐದನೇ ದಿನ ಬೆಳಗ್ಗೆ 7.15ಕ್ಕೆ ಕ್ವೀನ್ಸ್‌ಟೌನ್‌ನ ವಾಕಾಟಿಪುರ ಸರೋವರ ತೀರದ ರಿಡ್ಜಸ್ ಹೋಟೆಲ್‌ನಿಂದ 293 ಕಿಲೋಮೀಟರ್ ದೂರದ ಮಿಲ್‌ಫೋರ್ಡ್ ಸೌಂಡ್‌ಗೆ ಹೊರಟಾಗ ಏನೋ ಖುಷಿ. ಒಳಗೊಳಗೇ ಸಂತಸದ ಬುಗ್ಗೆ ಅರಳಿತ್ತು.

ಕ್ವೀನ್ಸ್‌ಟೌನ್ ಬಿಟ್ಟು ಆಗಲೇ ಮೂರು ಗಂಟೆ ಕಳದಿತ್ತು. ನಮ್ಮ ಗ್ರೇಟ್‌ಸೈಟ್ ಬಸ್ಸು ಮಿಲ್‌ಫೋರ್ಡ್ ಸೌಂಡ್ ರಾಜ್ಯ ಹೆದ್ದಾರಿ 94ರಲ್ಲಿ ನೂರು ಕಿಲೋಮೀಟರ್ ವೇಗದಲ್ಲಿ ಓಡುತ್ತಿತ್ತು. ಹಸಿರು ಮುರಿಯುವ ದಟ್ಟ ಗಿಡಮರಗಳ ತಂಪು, ನುಣುಪಾದ ವಿಶಾಲ ರಸ್ತೆ, ಬದಿಯಲ್ಲೇ ಧುಮುಕುವ ಜಲಪಾತಗಳು ಮೈ ನವಿರೇಳಿಸುತ್ತಿದ್ದವು.

ಗಂಟೆಗಟ್ಟಲೇ ಒಂದೇ ಜಾಗದಲ್ಲಿ ಕುಳಿತು ಕಾಲುಗಳು ಜೋಮು ಹಿಡಿದಿದ್ದವು. ಇದ್ದಕ್ಕಿದ್ದಂತೆ ಬಸ್ಸು ದಟ್ಟ ಕಾನನದ ಮಧ್ಯೆ ನಿಂತಿತು. ಹೊರಗೆ ನೋಡಿದರೆ ಹತ್ತಾರು ವಾಹನಗಳು ಅಲ್ಲಿ ಆಗಲೇ ಪಾರ್ಕ್ ಮಾಡಿದ್ದವು. 'ಇಲ್ಲಿ ಅದ್ಭುತವಾದ ಮಿರ್ರರ್ ಲೇಕ್‌ಗಳಿವೆ. ನಿಮಗೆ ಅರ್ಧಗಂಟೆ ಸಮಯವಿದೆ' ಎಂದು ಡ್ರೈವರ್ ಸೂಚನೆ ನೀಡಿದ.

ಕುತೂಹಲದಿಂದ ಕೆಳಗಿಳಿದು ಕಾಡಿನ ಕಾಲು ಹಾದಿಯಲ್ಲಿ ಹೆಜ್ಜೆ ಹಾಕಿದೆವು.